

‘ಇದು ನನ್ನಿಂದಾಗದು’ ಎಂದು ಹೇಳಿಬಿಟ್ಟೆ. ‘ಕಥೆಯ ಅಗತ್ಯಕ್ಕಾಗಿ ಹಾಗೇಕೆ ಮಾಡಬಾರದು? ಚಿತ್ರಾಂಗದೆ ಅರ್ಜುನನಿಗೆ ಹೊಡೆದರೆ ಏನೂ ಸಮಸ್ಯೆ?’ ಎಂದವರು ಪ್ರಶ್ನಿಸಿದರು. ‘ಅದೇನೇ ಇರಲಿ, ಇದು ಅಂತಿಮವಾಗಿ ಕಥಕಳಿಗೆ ಹೊಡೆದಂತೆಯೇ ಭಾಸವಾಗುತ್ತದೆ. ಇದು ಸಾಧ್ಯವಿಲ್ಲ’ ಎಂದು ನಾನು ತಿಳಿಸಿದೆ. ಹೀಗೆ ಮುಕ್ತವಾದ ಮಾತುಕತೆಗಳಿಗೆ ಅಲ್ಲಿ ಅವಕಾಶವಿತ್ತು. ಕಥಕಳಿ ವೇಷ ಧರಿಸದೆ ಸಾಮಾನ್ಯ ದಿರಿಸಿನಲ್ಲಿ ನಾನು ಮತ್ತು ಒಡಿಸ್ಸಿ ದಿರಿಸಿನಲ್ಲಿ ಅವರು ಪ್ರದರ್ಶನ ನೀಡಿದ್ದುಂಟು. ‘ಗೀತಗೋವಿಂದ’ ಕೃತಿಯನ್ನೂ ನಾವು ಇಬ್ಬರೂ ಸೇರಿ ಪ್ರದರ್ಶಿಸಿದ್ದೇವೆ. ಅವರೊಬ್ಬ ಅತ್ಯುತ್ತಮ ಕಲಾವಿದೆ. ಹೀಗೆಯೇ, ಒಡಿಸ್ಸಿಯ ಕೇಳುಚರಣ ಮೊಹಪಾತ್ರ, ಗುರು ವೇಂಪತಿ ಚಿನ್ನಸತ್ಯಮ್ ಸೇರಿದಂತೆ ಅನೇಕ ಉತ್ತಮ ಕಲಾವಿದರ ಸಂಸರ್ಗವನ್ನು ಒದಗಿಸಿದ ಪ್ರದೇಶ ದೆಹಲಿ.

**◆ ಹೊಸ ಹೊಸ ಪ್ರದರ್ಶನಗಳನ್ನು ಸಿದ್ಧಪಡಿಸಿ ಜಗತ್ತಿನ ವಿವಿಧ ರಾಷ್ಟ್ರಗಳಿಗೆ ಭೇಟಿ ಕೊಟ್ಟು ಕಥಕಳಿ ಪ್ರದರ್ಶನ ನೀಡಿದ್ದೀರಿ. ಆ ನೆನಪುಗಳನ್ನು ಹಂಚಿಕೊಳ್ಳಬಹುದಾ?**

ಕಥಕಳಿಯು ರಾಮಾಯಣ ಮತ್ತು ಮಹಾಭಾರತದ ಕಥೆಯನ್ನು ಮೀರಿ ಹೊಸ ಹೊಸ ಕಥೆಗಳನ್ನು ಬರಮಾಡಿಕೊಂಡಿದೆ. ನಾವು ಹೊಸ ಪ್ರೇಕ್ಷಕರಿಗೆ ಹೊಸ ರೀತಿಯ ಕಥೆಗಳನ್ನು ಕಟ್ಟಿಕೊಡುವ ಪ್ರಯತ್ನ ನಡೆಸಿದೆವು. ಶೇಕ್ಸ್‌ಪಿಯರ್‌ನ ‘ಒಥೆಲೋ’, ‘ಮ್ಯಾಕ್‌ಬೆತ್’ ನಾಟಕಗಳನ್ನು ಪ್ರಸ್ತುತಪಡಿಸಿದ್ದೇವೆ. ನಾನು ಅನೇಕ ಕಥೆಗಳನ್ನು ಕಥಕಳಿಗೆ ಅಳವಡಿಸಿದರೂ ‘ನೀಲಮಣೀಯಂ’, ‘ವಿಶ್ವಶಾಂತಿ’ ಪ್ರದರ್ಶನಗಳಿಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು. ಒಟ್ಟಿನಲ್ಲಿ ಕಥಕಳಿಯು ಜನಪ್ರಿಯವೂ, ಸುಂದರವೂ ಆಗುವಂತೆ ಮಾಡುವ ಪ್ರಯತ್ನಗಳನ್ನು ನಡೆಸಿದೆ. ಯಾವುದೇ ಕಲೆಯಾಗಲಿ, ಅದು ಜನರಿಗೆ ಒಳ್ಳೆಯ ಜ್ಞಾನವನ್ನು ಕೊಡುವಂತಿರಬೇಕು. ನನಗೆ ಕಥಕಳಿ ಹಾಗೂ ಇತರ ಎಲ್ಲ ಕಲೆಗಳ ಮೇಲೆ ಗೌರವವಿದೆ. ಕಲಾವಿದರಾದವರು ಎಲ್ಲಾ ಕಲಾಪ್ರಕಾರವನ್ನು ಗೌರವಿಸುವುದು ಮುಖ್ಯ.

**◆ ವಿದೇಶದಲ್ಲಿ ನೀಡಿದ ಪ್ರದರ್ಶನಗಳ ನೆನಪುಗಳು?**

ಜಗತ್ತಿನ ವಿವಿಧ ದೇಶಗಳ ವೇದಿಕೆಗಳಲ್ಲಿ